

ಪ್ರಾಣಿಗಳ ಪಟ ನೀವು ತೆಗೆಯೋ ಹಂಗಿಲ್ಲ. ಅದೆಲ್ಲಾ ಇಲ್ಲಿ ನಿಷಿದ್ಧ. ಮೇಲಧಿಕಾರಿಗಳು ಬಂದರೆ ಕೇಸು ಜಡಿಯುವರೆಂದೂ, ನೀವು ತಕ್ಷಣ ಜಾಗ ಖಾಲಿಮಾಡುವುದು ಸೂಕ್ತವೆಂದು" ಹೆದರಿಸಿದ. ನನಗೆ ಅದರ ಒಂದು ಫೋಟೊ ಕೂಡ ಸಿಕ್ಕಿರಲಿಲ್ಲ. ಹೀಗಾಗಿ ನಾನು ಅವನಲ್ಲಿ ಅರೆಬರೆ ತಮಿಳಿನಲ್ಲಿ "ಅಣ್ಣೈ ನಾವು ತುಂಬಾ ದೂರದ ಕರ್ನಾಟಕದಿಂದ ಇದರ ಫೋಟೊ ತೆಗೆಯಲು ಬಂದಿದ್ದೇವೆ. ದಯಮಾಡಿ ಐದು ನಿಮಿಷ ಅವಕಾಶ ಕೊಡಿ. ನಾವು ಯಾವ ರೀತಿಯ ತೊಂದರೆಯನ್ನೂ ಈ ಪ್ರಾಣಿಗೆ ಮಾಡುವುದಿಲ್ಲ. ನಾನು ಮಕ್ಕಳಿಗೆ ಪಾಠ ಮಾಡುವ ಮೇಷ್ಟ್ರು. ನಮ್ಮ ಮಕ್ಕಳು ಓದುವ ಪುಸ್ತಕದಲ್ಲಿ ಇದರ ಬಗ್ಗೆ ಪಾಠವಿದೆ. ನಮ್ಮ ವಿದ್ಯಾರ್ಥಿಗಳಿಗೆ ತೋರಿಸಲು ಇದರ ಒಂದು ಪಟ ಬೇಕು ಬೇಕು" ಎಂದು ವಿನಂತಿಸಿಕೊಂಡೆ.

"ಹ್ಞೂ ಕಂಡ್ರಿ. ಇಲ್ಲಿಗೆ ಬರೋರೆಲ್ಲಾ ಹೀಗೆ ಏನಾದ್ರೂ ಒಂದು ಕಾರಣ ಹೇಳ್ತಾರೆ. ನಮ್ಮ ಸಂಕಟ ಕೇಳೋರು ಮಾತ್ರ ಯಾರೂ ಇಲ್ಲ. ನಿಮ್ಮಂತ ಟೂರಿಸ್ಟುಗಳು ಬಂದು ಇವಕ್ಕೆ ಬಿಸ್ಕತ್ತು, ಬಾಳೆಹಣ್ಣು, ಕೂಲ್ ಡಿಂಕ್ಸು, ಮಣ್ಣುಮಸಿ ಅಂತ ಏನೇನೋ ಕೊಟ್ಟು ದುರಭ್ಯಾಸ ಕಲಿಸಿ ಹೋಗ್ತೀರಿ. ಹಿಂಗಾಗಿ ಈ ಕಾಡುಪ್ರಾಣಿಗಳ ಬದುಕೇ ಕುಲಗೆಟ್ಟು ಹೋಗಿದೆ. ಹೂವಿನ ಬೀಜ, ಹಣ್ಣು ತಿನ್ನೋ ಜಾಗದಲ್ಲಿ ಚಿಪ್ಸು ತಿನ್ನುತ್ತಿವೆ. ಅವು ಕಾಡಿಗೋಗಿ ಸಹಜವಾಗಿ ಬಾಳೋದು ನಿಲ್ಲಿಸಿ ಇಲ್ಲೇ ರಸ್ತೆ ಮೇಲೆ ಭಿಕ್ಷುಕರ ತರಹ ಅಲೀತಾ ಇರ್ತಾವೆ. ಇವತ್ತು ನೋಡಿ ಇಲ್ಲೊಬ್ಬರ ಮನೆಗೆ ನುಗ್ಗಿ ದಾಂಧಲೆ ಬೇರೆ ಎಬ್ಬಿಸಿವೆ. ಹಳ್ಳಿಜನ ಸಾಕಾಗಿ ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಮೇಲೆ ತಿರುಗಿ ಬಿದ್ದಿದ್ದಾರೆ. ಈ ಕಂಪ್ಲೇಂಟ್ ಮೇಲಿನ ತನಕ ಹೋಗಿದೆ. ಈ ಕರಿಮಂಗಗಳಿಗಿಂತ ಇದನ್ನು ನೋಡೋಕೆ ಬರೋ ನಿಮ್ಮಂತಹ ಊರ ಮಂಗಗಳ ಹಾವಳಿ ಇಲ್ಲಿ ಹೆಚ್ಚಾಗಿದೆ. ನನಗೂ ದಿನಾ ಇದೇ ವಿಷಯ ಹೇಳಿ ಹೇಳಿ ಸಾಕಾಗಿದೆ. ಒಟ್ಟು ಈ ದರಿದ್ರ ಕೆಲಸಾನೆ ಬ್ಯಾಡವಾಗಿದೆ. ಸಂಬಳಾನೂ ಅಷ್ಟಕಷ್ಟೆ. ಏಯ್ ಸ್ವಾಮಿ, ಇಂಗ ಪಾರ್. ನಮ್ಮ ಸಾಹೇಬ ರೌಂಡಿಗೆ ಬರೋದ್ರೊಳಗೆ ನೀವು ಇಲ್ಲಿರಬಾರದು. ಆಮೇಲೆ ಏನಾದ್ರೂ ಹೆಚ್ಚು ಕಡಿಮೆ ಆದ್ರೆ ನಾನು ಜವಾಬ್ದಾರಿ ಹೊತ್ಕೊಳಲ್ಲ" ಎಂದು ಕೊಂಚ ವ್ಯಗ್ರನಾಗಿ ಹೇಳಿದನು. ಅವನ ಮಾತಲ್ಲಿ ನೋವು, ಸಿಟ್ಟು ಎರಡೂ ಸೇರಿಕೊಂಡಿದ್ದವು. ಆತ ಮುಲಾಜಿಗೆ ಬಗ್ಗದವನಂತೆ ಕಂಡು ಬಂದ.

ಆತ ಹೇಳಿದ ಅಷ್ಟೂ ವಿಷಯಗಳು ಸತ್ಯವೇ ಆಗಿದ್ದರೂ, ಸದ್ಯ ನಾನೊಂದು ಫೋಟೊ ತೆಗೆಯಬೇಕೆಂಬ ಹಟಕ್ಕೆ ಬಿದ್ದಿದ್ದೆ. ಹಳ್ಳಿಯ ಜನರಿಗೂ